Geetha Shishu Shikshana Sangha (R)

**SIMHA SUBBAMAHALAKSHMI FIRST GRADE COLLEGE**

**KRS ROAD, MYSURU-570 016**

# ಯಶಸ್

**YASHAS** A SSFGC weekly newsletter

**Volume – 1** **Issue No. – 5** **29th June 2019**



## Social Business: Youth Network

Social business is a new form of capitalism and a new kind of enterprise based on the self-lessness of people. Nobel Laureate Prof. Muhammad Yunus, 'father of microcredit', who pioneered this new form of capitalism, Social Business, says "it is a new kind of business, dedicated to solving social, economic and environmental problems that have long plagued mankind : hunger, homelessness, diseases, pollution, ignorance. In this form of business, the driving objective, therefore, is serving the society, not profit making. Nevertheless, it is a commercial venture following the very same business principles as other kinds of businesses do, but the goal makes the difference.

To begin with Professor Yunus got himself involved in the poverty problems as an academician and later as an activist, finally culminating in the historic announcement of starting a bank for the poor - "Gramin bank", which crowned him with the title "Banker to the Poor".

**How to build a social business?**



Professor Yunus says build it "around people". "My work in Bangladesh is built around the many needs of the poor. You can often develop a great social business idea by starting with the intended beneficiaries and then working backckward. The goal is to find a product or create a service that empowers your customers. Try to give them something they do not just consume but that gives them a chance to earn, earn more or save more than they spend on your product. This can

be a credit with which your customers can set up their own business, increasing their income and giving them a chance to become financially independent".

Being inspired by Professor Yunus' life and work an innovative social business model for youth was launched in Mysore about a decade ago. A forum which engages youth studying in Schools and colleges in an economic program involving micro savings from their "pocket money" and harnessing the same in building 'educapital' is all about SBYN. It is a tender economic enterprise which aims at first making students financially literate and then realise the importance of 'edu capital' in real life. The model was formally presented in the Berlin Social Business Summit in 2015.



A chapter of SBYN was recently launched at SSFGC by the students to mark the birthday of Professor Yunus (28/06/2019). The day also coincided with the 7th Social Business Day, held in Bangkok, Thailand. The students appeared highly enthusiastic about their new engagement in youth social business. I wish them very best.

*Reference: Building Social Business Network, The New Kind of Capitalism that serves Humanity's most pressing needs by Muhammad Yunus with Karl Weber, The University Press Ltd, 2010.*


***Prabhakara K V Ph.D***
***Convener***
***Social Business Youth Network***


## ಪೂಜಾ ಕುಣಿತ




**ದಿ**ನಾಂಕ 24 ಜೂನ್ 2019 ರಂದು ದಿ ಫೋರಮ್ ನಲ್ಲಿ ದ್ವಿತೀಯ ಬಿ. ಕಾಂ ವಿದ್ಯಾರ್ಥಿ ಶ್ರೀ ಆರ್. ಕುಮಾರ್ ಅವರು ಪೂಜಾ ಕುಣಿತದ ಪ್ರದರ್ಶನವನ್ನು ನೀಡಿದರು. ಪೂಜಾ ಕುಣಿತವು ಶಕ್ತಿ ದೇವತೆಗೆ ಸಂಬಂಧಿಸಿದಂತಹ ಕುಣಿತವಾಗಿದೆ. ಇದು ಬೆಂಗಳೂರು, ಮಂಡ್ಯ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಮೈಸೂರು ಜಿಲ್ಲೆಗಳಲ್ಲಿ ಹೆಚ್ಚು ಪ್ರಚಲಿತವಾಗಿರುವಂತ ಕಲಾಪ್ರಕಾರ. ಹಬ್ಬ, ಉತ್ಸವದ ದಿನಗಳಲ್ಲಿ ದೇವತೆಯು 'ಪೂಜೆ'ಯ ರೂಪದಲ್ಲಿ ಹೊರಬರುತ್ತಾಳೆ. ಬಿದಿರಿನ ತಳಿ (ತಟ್ಟಿ) ಮಧ್ಯೆ ದೇವತೆಯ ಮುಖವಾಡಗಳನ್ನು ಇರಿಸಿಕೊಂಡು ಕುಣಿಯುವುದಕ್ಕೆ ಪೂಜಾ ಕುಣಿತವೆಂದು ಕರೆಯುವರು.

ಮಂಡ್ಯ ಜಿಲ್ಲೆ ಬನ್ನೂರಿನ ದಾಸೇಗೌಡನ ಕೊಪ್ಪಲಿನವರಾದ ಶ್ರೀ ಆರ್. ಕುಮಾರ್ ಜಾನಪದ ಕಲಾವಿದನಾಗಿ ಬೆಳೆಯುತ್ತಿರುವುದು ಕಾಲೇಜಿಗೆ ಹೆಮ್ಮೆಯ ಸಂಗತಿ. ಇವರು ೯ನೇ ತರಗತಿಯಿಂದಲೇ ಪೂಜಾ ಕುಣಿತಕ್ಕೆ ಆಕರ್ಷಿತರಾಗಿ ನಿರಂತರ ಅಭ್ಯಾಸದಿಂದ ಈ ಜಾನಪದ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಮಗನ ಆಸಕ್ತಿ – ಉತ್ಸಹವನ್ನು ಕಂಡ ತಂದೆ ಶ್ರೀ ನಾಗರಾಜು ಮತ್ತು ತಾಯಿ ಶ್ರೀಮತಿ ರುಕ್ಮಣಿಯವರು ಮಗನಿಗೆ ಶಾಸ್ತ್ರಬದ್ಧವಾಗಿ ಕಲಿಯುವುದಕ್ಕೆ ಪ್ರೋತ್ಸಾಹ ಮತ್ತು ತರಬೇತಿಯನ್ನು ನೀಡಿದರು. ಗುರುಗಳಾದ ರವಿಯವರ ಬಳಿ ಪೂಜಾ ಕುಣಿತವನ್ನು ಅಭ್ಯಾಸ ಮಾಡಿ ತಾನು ೧೦ನೇ ತರಗತಿಯಲ್ಲಿ ಓದುತ್ತಿದಾಗಲೇ ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ನಡೆದ ಯುವ ದಸರಾದಲ್ಲಿ ಮೊದಲ ಪ್ರದರ್ಶನವನ್ನು ನೀಡಿದರು. ಆನಂತರ ಜಿಲ್ಲಾಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ಹಲವು ಕಡೆ ಯಶಸ್ವಿ ಪ್ರದರ್ಶನವನ್ನು ನೀಡುತ್ತಿದ್ದಾರೆ.



ಪೂಜಾ ಕುಣಿತಕ್ಕೆ ವಾದ್ಯಗಳ ಹಿಮ್ಮೇಳ ಅವಶ್ಯಕ. ಪೂಜಾ ಕುಣಿತದ ಪೂರ್ವ ಸಿದ್ಧತೆ ಬಹಳ ಕಷ್ಟ. ಸಮಾನಾಂತರ ಬಿದಿರಿನ ಕಡ್ಡಿಗಳಿಂದ ತಡಿಕೆಯನ್ನು ಸಿದ್ಧಪಡಿಸಬೇಕಾಗುತ್ತದೆ. ನಂತರ, ಮೇಲ್ಭಾಗದಲ್ಲಿ ಕಳಸ ಸ್ಥಾಪಿಸಿ, ಬಣ್ಣದ ವಸ್ತ್ರ, ಹೂವುಗಳಿಂದ ತಳಿಯನ್ನು ಸಿಂಗರಿಸಿ, ಮಧ್ಯಭಾಗಕ್ಕೆ ಮಾರಮ್ಮದೇವಿ ಮುಖವಾಡ ಅಥವಾ ತಮ್ಮ ಇಷ್ಟದೈವದ ಮುಖವಾಡವನ್ನು ಅಳವಡಿಸಲಾಗುತ್ತದೆ. ನಂತರ, ಸಿಂಗರಿಸಿದ ತಳಿಯನ್ನು ಗಿಂಡಿಯ ಮೇಲ್ಭಾಗಕ್ಕೆ ಅಳವಡಿಸಲಾಗುತ್ತದೆ. ಹೀಗೆ ಪೂಜಾ ಕುಣಿತದ ತಡಿಕೆಯನ್ನು ತಯಾರಿಸಲಾಗುತ್ತದೆ. ನಂತರ ತಡಿಕೆಗೆ ಪೂಜೆ ಸಲ್ಲಿಸಿ ತಲೆಯ ಮೇಲೆ ಸಮಾನಾಂತರವಾಗಿ ಸಿಂಬಿ ಕಟ್ಟಿಕೊಂಡು ಕುಣಿಯಲಾಗುತ್ತದೆ. ಈ ಮಾದರಿಯಲ್ಲಿ ಸುಮಾರು ೫ ಅಡಿ ಉದ್ದ, ೪ ಅಡಿ ಅಗಲವಿರುವ ತಳಿಯನ್ನು ಸಿದ್ಧಮಾಡಿಕೊಂಡು ಬಂದಿದ್ದ ಆರ್. ಕುಮಾರ್ ಅವರು ಪೂಜಾ ಕುಣಿತವನ್ನು ಪ್ರದರ್ಶಿಸಿದರು. ಇದರ ಜೊತೆಗೆ ಪೂಜಾ ಕುಣಿತದ ವಿವಿಧ ಮಾದರಿಗಳನ್ನು ಪ್ರದರ್ಶಿಸುತ್ತಾ ನೆಲದ ಮೇಲೆ ನೋಟು ಹಾಕಿ ಎತ್ತಿಕೊಳ್ಳುವ ಮತ್ತು ಬಾಯಲ್ಲಿ ತಳಿಯನ್ನು ಕಚ್ಚಿಕೊಂಡು ಕುಣಿಯುವ ಪ್ರದರ್ಶನಗಳನ್ನು ಅವರು ತೋರಿಸಿದರು. ಕುಮಾರ್ ಅವರು ಈ ಪೂಜಾ ಕುಣಿತ ಜಾನಪದ ಕಲೆಯ ಜೊತೆಗೆ ತಮಟೆ, ಲಗಾರಿ ಕಲಿಕೆಯಲ್ಲಿಯೂ ನಿಪುಣರಾಗಿದ್ದಾರೆ.

## ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳೊಂದಿಗೆ ನಿರ್ದೇಶಕರ ಸಭೆ






ಅಭಿಪ್ರಾಯಗಳನ್ನು ಆಲಿಸಿದರು. ತಿಂಗಳ ಶೈಕ್ಷಣಿಕ ಕಾರ್ಯಚಟುವಟಿಕೆಗಳ ಪರಿಶೀಲನೆಯನ್ನು ಮಾಡಿ, ಹಾಜರಾತಿ, ಪರಿಹಾರ ತರಗತಿ, ಪಠ್ಯೇತರ ಚಟುವಟಿಕೆಗಳು, ವಿದ್ಯಾರ್ಥಿಗಳ ಸಂಸತ್ ಮುಂತಾದ ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದರು.

# ಪ್ರಚಲಿತ ವಿದ್ಯಾಮಾನಗಳ ಕುರಿತ ಕ್ವಿಜ್ ಕಾರ್ಯಕ್ರಮ





ದಿನಾಂಕ 27 ಜೂನ್ 2019 ರಂದು ದಿ ಫೋರಮ್‌ನಲ್ಲಿ ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರಚಲಿತ ವಿದ್ಯಾಮಾನಗಳನ್ನು ಕುರಿತು ಕ್ವಿಜ್ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಮೇ – ಜೂನ್ ತಿಂಗಳಿನಲ್ಲಿ ನಡೆದ ಸಮಾಜದ ಪ್ರಚಲಿತ ವಿದ್ಯಾಮಾನಗಳನ್ನು ಮುಖ್ಯವಾಗಿ ಪರಿಗಣಿಸಿ ಪ್ರಶ್ನೆಗಳನ್ನು ತಯಾರಿಸಲಾಗಿತ್ತು. ಆರು ವಿದ್ಯಾರ್ಥಿ ಮತ್ತು ಆರು ವಿದ್ಯಾರ್ಥಿನಿಯರ ಎರಡು ತಂಡಗಳು ಸಮಾನಾಂತರವಾದ ಅಂಕಗಳನ್ನು ಪಡೆದುಕೊಂಡರು. ಈ ಕಾರ್ಯಕ್ರಮವನ್ನು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಬಿ. ಎಸ್. ಸುದೀಪ್ ಅವರು ನಡೆಸಿಕೊಟ್ಟರು. ಇಂಗ್ಲಿಷ್ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಅನಿಲ್ ಅವರು ಸಹಕರಿಸಿದರು.

# ಜುಲೈ ತಿಂಗಳ ವಿದ್ಯಾರ್ಥಿ ಸಂಸತ್ತಿಗೆ ಚುನಾವಣೆ



ದಿನಾಂಕ 28 ಜೂನ್ 2019 ರಂದು ಜುಲೈ ತಿಂಗಳ ವಿದ್ಯಾರ್ಥಿ ಸಂಸತ್ತಿಗೆ ಚುನಾವಣೆಯನ್ನು ನಡೆಸಲಾಯಿತು. ಹಿಂದಿನ ತಿಂಗಳಂತೆಯೆ ಜುಲೈ ತಿಂಗಳ ವಿದ್ಯಾರ್ಥಿ ಸಂಸತ್ತನ್ನು ವ್ಯವಸ್ಥಿತವಾಗಿ ರಚಿಸಲಾಯಿತು. ಪ್ರಾಥಮಿಕ ಗುಂಪುಗಳಿಂದ ಗುಂಪಿನ ನಾಯಕರ ಆಯ್ಕೆ, ತರಗತಿ ಹಂತದಲ್ಲಿ ತರಗತಿ ಪ್ರತಿನಿಧಿಗಳ ಆಯ್ಕೆಯಾಗಿ, ಆನಂತರ ಆ ತರಗತಿ ಪ್ರತಿನಿಧಿಗಳು ಕಾಲೇಜಿನ ಹಂತದ ನಾಯಕರ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡರು. ಪ್ರಥಮ ಬಿ.ಸಿ.ಎ ವಿದ್ಯಾರ್ಥಿನಿ ಪ್ರಿಯಾಂಕ ಮತ್ತು ದ್ವಿತೀಯ ಬಿ. ಕಾಂ ವಿದ್ಯಾರ್ಥಿನಿ ಅನುಷಾ ಆಚಾರ್ಯ ಅವರು ಉಪ ನಾಯಕರಾದರೆ, ತೃತೀಯ ಬಿ. ಕಾಂ ವಿದ್ಯಾರ್ಥಿ ಸೈಯದ್ ಜುನೇದ್ ಪ್ರಧಾನ ನಾಯಕನಾಗಿ ಆಯ್ಕೆಯಾದರು. ಚುನಾವಣೆಯ ನಂತರ ಆಯ್ಕೆಯಾದ ತರಗತಿ ಪ್ರತಿನಿಧಿಗಳು ಮತ್ತು ನಾಯಕರೆಲ್ಲರನ್ನು ನಿರ್ದೇಶಕರು ಮತ್ತು ಪ್ರಾಂಶುಪಾಲರು ಅಭಿನಂದಿಸಿದರು. ಈ ಚುನಾವಣೆಯನ್ನು ಇಂಗ್ಲಿಷ್ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಅನಿಲ್. ಎಂ ಅವರು ವ್ಯವಸ್ಥಿತವಾಗಿ ನಡೆಸಿಕೊಟ್ಟರು. ಆಯಾ ತರಗತಿಯ ಪ್ರಾಧ್ಯಾಪಕರಗಳೆಲ್ಲರು ಸಹಕರಿಸಿದರು.



# ಪ್ರಾಂಶುಪಾಲರ ಸಭೆ

ದಿನಾಂಕ 28 ಜೂನ್ 2019 ರಂದು ತಿಂಗಳ ಕೊನೆಯಲ್ಲಿ ಪ್ರಾಂಶುಪಾಲರ ಸಭೆಯನ್ನು ಪ್ರಾಂಶುಪಾಲರ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಸಭೆಯಲ್ಲಿ ಜೂನ್ ತಿಂಗಳನಲ್ಲಿ ನಡೆದ ಕಾರ್ಯಚಟುವಟಿಕೆಗಳ ಸಮೀಕ್ಷೆಯನ್ನು ಮಾಡಿ ಮುಂದಿನ ತಿಂಗಳ ಕಾಲೇಜಿನ ಕೆಲಸ ಕಾರ್ಯಗಳ ಬಗೆಗೆ

ಚರ್ಚಿಸಲಾಯಿತು.

## ರಾಷ್ಟ್ರೀಯ ಸೇವಾ ಯೋಜನೆಯಿಂದ ಶ್ರಮದಾನ










**ದಿ**ನಾಂಕ 29 ಜೂನ್ 2019 ರ ಶನಿವಾರ ಮಧ್ಯಾಹ್ನ 12. 30 ರಿಂದ ೧.೩೦ ರವರೆಗೆ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಕಾಲೇಜಿನ ಆವರಣ ಮತ್ತು ಕಾಲೇಜಿನ ಸುತ್ತ ಸ್ವಚ್ಛತಾ ಕಾರ್ಯಕ್ರಮವನ್ನು ದೈನಂದಿನ ಕಾರ್ಯಕ್ರಮದ ಭಾಗವಾಗಿ ನಡೆಸಿಕೊಟ್ಟರು. ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಧಿಕಾರಿಗಳಾದ ಕು. ಪ್ರಿಯಾಂಕ ಎಂ.ಎನ್ ಅವರು ಇದನ್ನು ನಿರ್ವಹಿಸಿದರು. ಕಾಲೇಜಿನ ವಿಭಾಗದ ಪ್ರಾಧ್ಯಾಪಕರೆಲ್ಲರು ಇದರಲ್ಲಿ ಪಾಲ್ಗೊಂಡಿದ್ದರು.

## ನಾಡಪ್ರಭು ಕೆಂಪೇಗೌಡರ ಜಯಂತಿ



**ದಿ**ನಾಂಕ 27 ಜೂನ್ 2019 ರಂದು ಕಾಲೇಜಿನ ದಿನದ ಆರಂಭ ಟು ಗ್ಯಾದರ್‌ನಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ವಿಜಯನಗರದ ಸಾಮಂತ ರಾಜನಾಗಿದ್ದ ಕೆಂಪೇಗೌಡರು 1537 ರಲ್ಲಿ ಬೆಂಗಳೂರು ನಗರವನ್ನು ಕಟ್ಟಿದರು. ನಂತರ ಕೆಂಪೇಗೌಡರ ರಾಜಧಾನಿಯು ಯಲಹಂಕದಿಂದ ಬೆಂಗಳೂರಿಗೆ ಸ್ಥಳಾಂತರವಾಯಿತು. ನಗರವನ್ನು ಪ್ರಮುಖ ವಾಣಿಜ್ಯ ಕೇಂದ್ರವನ್ನಾಗಿ ಮಾಡಬೇಕೆಂದು ಕೆಂಪೇಗೌಡರ ಮಹದಾಸೆಯಾಗಿತ್ತು. ಅದರಂತೆ ತಮ್ಮ ಕೋಟೆಯೊಳಗೆ ಆಯಾ ಕುಲಕಸುಬುದಾರರಿಗೆ ಅನುಗುಣವಾಗಿ ಪೇಟೆಗಳನ್ನು ಕಟ್ಟಿಸಿಕೊಟ್ಟು ವ್ಯಾಪಾರಕ್ಕೆ ಅನುಕೂಲ ಮಾಡಿಕೊಟ್ಟಿದ್ದರು. ಇಂದು ಬೆಂಗಳೂರು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುತ್ತಿರುವ ವಾಣಿಜ್ಯ ನಗರವಾಗಿದೆ. ಈ ಎಲ್ಲಾ ವಿಚಾರಗಳನ್ನು ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸ್ಮರಿಸಿದರು.

## ವಿವಿಧ ಕ್ರೀಡೆಗಳಿಗೆ ವಿದ್ಯಾರ್ಥಿಗಳ ಆಯ್ಕೆ






ದಿನಾಂಕ 28 ಜೂನ್ 2019 ರಂದು ದೈಹಿಕ ನಿರ್ದೇಶಕರಾದ ಶ್ರೀ

# ಚಿತ್ರಕಲಾವಿದೆ ಕು. ಆರ್ಯ. ಬಿ.ಎಸ್



ಪ್ರಥಮ ಬಿ.ಕಾಂ ವಿದ್ಯಾರ್ಥಿನಿ ಕು. ಆರ್ಯ. ಬಿ.ಎಸ್. ಅವರು ಮರದ ಎಲೆಯಲ್ಲಿ ಸುಂದರವಾಗಿ 'ಭೂಮಿಯನ್ನು ಉಳಿಸಿ' ಎಂಬ ಸಂದೇಶವನ್ನು ಸಾರುವಂತೆ ಬಣ್ಣಗಳಿಂದ ಬಿಡಿಸಿದ ಚಿತ್ರವಿದು.

ಚೆನ್ನರಾಯಪಟ್ಟಣದವರಾದ ಬಿ.ಎಸ್. ಆರ್ಯ ಅವರು ಶ್ರೀಯುತ ಸುರೇಶ್ ಬಿ.ಎಲ್ ಮತ್ತು ವೇದ. ಬಿ.ಎಸ್ ಅವರ ದಂಪತಿಗಳ ಮಗಳು. ಬಾಲ್ಯದಿಂದಲೂ ಚಿತ್ರಕಲೆಯಲ್ಲಿ ಆಸಕ್ತಿಯನ್ನು ಹೊಂದಿರುವ ಇವರು, ಚಿತ್ರಗಳನ್ನು ವಿವಿಧ ಕ್ಯಾನ್ವಸ್‌ಗಳಲ್ಲಿ ತರುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಮರದ ಎಲೆಯೊಂದರ ಮೇಲೆ – ನೆಲ, ಜಲ, ಗಾಳಿ, ಮರಗಳೆಲ್ಲವನ್ನು ಒಳಗೊಂಡ ಪ್ರಕೃತಿಯನ್ನು ಉಳಿಸಿ ಎಂಬ ಸಂದೇಶ ಸಾರುವ ಚಿತ್ರವೊಂದನ್ನು ಅವರು ಬಿಡಿಸಿದ್ದಾರೆ. ಅವರ ಕಲಾ ಆಸಕ್ತಿ ಮತ್ತು ಪ್ರಯತ್ನಕ್ಕೆ ಅಭಿನಂದನೆಗಳು. ಅವರ ಕಲಾಸಕ್ತಿ ಹೀಗೆಯೇ ಮುಂದುವರಿಯಲಿ ಎಂದು ಹಾರೈಸುತ್ತೇವೆ.

**India of My Dreams - M. K. Gandhi**

*Everything in India attracts me. It has everything that a human being with highest possible aspirations can want.*

*-Young India, 21-2'-29*

## Photo Corner



**ಕನ್ನಡ ವರದಿಗಾರರು**
ಡಾ. ಬಿ. ಎಸ್. ಸುದೀಪ್, ಮುಖ್ಯಸ್ಥರು, ಕನ್ನಡ ವಿಭಾಗ

**ಛಾಯಾಚಿತ್ರ ಕೃಪೆ**
ಡಾ. ಪ್ರಭಾಕರ ಕೆ. ವಿ. ನಿರ್ದೇಶಕರು
ಡಾ. ಬಿ. ಎಸ್. ಸುದೀಪ್, ಮುಖ್ಯಸ್ಥರು, ಕನ್ನಡ ವಿಭಾಗ
ಶ್ರೀ ಅನಿಲ್. ಎಂ, ಸಹಾಯಕ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಕು. ಪ್ರಿಯಾಂಕ. ಎಂ. ಎನ್, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ